STARRED QUESTIONS

(to which oral answers were given).

Privately managed Primary, Middle and High Schools in Bangalore City and other places in the State.

*Q.—115. Sri GANGADHAR NAMOSHI (Gulbarga).—

Will the Government be pleased to state:—

(a) the number of privately managed Primary, Middle and High Schools receiving aid from the Government in Bangalore City and other places in the State (separate figures may be furnished);

(b) the number of teachers working therein (up-to-date information may be furnished);

(c) whether it has come to their notice that the teachers working in the said private schools are not being paid salary as in the case of Government Schools Teachers;

(d) whether there is any difference in other benefits between teachers working in Government Schools and aided schools and if so, the details may be furnished;

(e) whether they propose to take action to see that the teachers in aided schools are put at least on the same footing as teachers in Government Schools?

A.—Sri S. R. KANTHI (Minister for Education).—

		Bangalore City	*Other places*
(a)			
	Primary Schools ...	161	2914
	Middle Schools ...	66	70
	High Schools ...	48	489
(b)	Primary Schools ...	1153	5588
	Middle Schools ...	553	442
	High Schools ...	748	5759

(c) No.

(d) Yes. The teachers in aided schools have the benefit of Aided School Provident Fund, while those in Government Schools have the benefit of pension.

(e) No. The question of extending the benefits of pension, gratuity and insurance to the Teachers of aided Schools is being finalised.

ಶ್ರೀ ಗಂಗಾಧರನಾಮೋಷಿ.—ಸರ್ಕಾರದಿಂದ ಧನ ಸಹಾಯವನ್ನು ಪಡೆಯುತ್ತಿರುವಂಥ ಸ್ಕೂಲುಗಳಲ್ಲಿ ಉಪಾಧ್ಯಾಯರಿಗೆ ಎಲ್ಲಾ ತರಹ ಫೆಸಿಲಿಟೀಸ್ ಸಿಕ್ಕುತ್ತವೆಂದು ಹೇಳಿದ್ದೀರಿ, ಕೆಲವು ಸ್ಕೂಲುಗಳಲ್ಲಿ 8-9 ತಿಂಗಳುಗಳವರೆಗೂ ಉಪಾಧ್ಯಾಯರಿಗೆ ಸಂಬಳವನ್ನು ಕೊಡುವುದಿಲ್ಲ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

†ಶ್ರೀ ಎಸ್. ಆರ್. ಕಂಠಿ.—ಅದು ಬಂದಿಲ್ಲ.

ಶ್ರೀ ಗಂಗಾಧರನಾಮೋಷಿ.—ಆತರಹ ಅರ್ಜಿಗಳೇನಾದರೂ ತಮ್ಮ ಹತ್ತಿರ ಬಂದಿವೆಯೇ?

ಶ್ರೀ ಎಸ್. ಆರ್. ಕಂಠಿ.—ಆತರಹ ಅರ್ಜಿಗಳು ನಮಗೆ ಬಂದಿಲ್ಲ. ಮಾನ್ಯ ಸದಸ್ಯರು ಕೊಟ್ಟರೆ ಅದನ್ನು ನೋಡಿಸುತ್ತೇನೆ.

ಶ್ರೀ ಗಂಗಾಧರ ನಾಮೋಷಿ.—ಹಿಂದಿ ಪಾಠಶಾಲೆಗಳಲ್ಲಿರತಕ್ಕ ಮತ್ತು ಮಿಡಲ್ ಸ್ಕೂಲುಗಳಲ್ಲಿರತಕ್ಕ ಉಪಾಧ್ಯಾಯರುಗಳೇನಾದರೂ ಆ ವಿಷಯದಲ್ಲಿ ಅರ್ಜಿಯನ್ನು ಕಳುಹಿಸಿದ್ದಾರೆಯೇ?

ಶ್ರೀ ಎಸ್. ಆರ್. ಕಂಠಿ.—ಈ ಮಾನ್ಯ ಸದಸ್ಯರು ಈಗತಾನೆ ನನ್ನ ಗಮನಕ್ಕೆ ತರುತ್ತಿದ್ದಾರೆ. ಅದನ್ನು ನಾನು ನೋಡುತ್ತೇನೆ.

ಶ್ರೀ ಕೆ. ದೇವಯ್ಯ.—ಬೆಂಗಳೂರು ಸಿಟಿಯಲ್ಲಿರತಕ್ಕ ಪ್ರೈವೇಟ್ ಹೈಸ್ಕೂಲುಗಳ ಉಪಾಧ್ಯಾಯರಿಗೆ 1-4-1957ನೇ ಇಸವಿಯಿಂದ ಅಲೋಕೇಷನ್ ಸ್ಕೇಟ್ ಮೆಂಟ್ ಮಾಡಿಕೊಡದೆ ಇರುವುದರಿಂದ ಅಲ್ಲಿರತಕ್ಕ ಉಪಾಧ್ಯಾಯರುಗಳಿಗೆ ತೊಂದರೆಯಾಗಿದೆ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಎಸ್. ಆರ್. ಕಂಠಿ.—ಬೆಂಗಳೂರು ಸಿಟಿಯ ವಿಷಯ ನನಗೆ ಗೊತ್ತಿಲ್ಲ. ಕೆಲವು ಕಡೆಗಳಲ್ಲಿ ಅಲೋಕೇಷನ್ ಸ್ಕೇಟ್‌ಮೆಂಟ್ ಆಗಿಲ್ಲ; ಅದನ್ನು ಮಾಡಿಸುತ್ತಿದ್ದೇವೆ. ಸೌತ್ ಕೆನರಾದಲ್ಲಿ 1957ನೇ ಇಸವಿಯ ಮತ್ತು 1960ನೇ ಇಸವಿಯ ಅಲೋಕೇಷನ್ ಸ್ಕೇಟ್ ಮೆಂಟ್ ಆಗಿರಲಿಲ್ಲ; ಅದನ್ನು ಮಾಡಿಸಿದ್ದೇವೆ. ಅದರಂತೆ ಬೊಂಬಾಯಿ ಕರ್ನಾಟಕದಲ್ಲಿಯೂ 1957ನೇ ಇಸವಿಯ ಮತ್ತು 1961ನೇ ಇಸವಿಯ ಅಲೋಕೇಷನ್ ಸ್ಕೇಟ್‌ಮೆಂಟ್ ಆಗಿರಲಿಲ್ಲ. ಅದೂ ಕೂಡ ಈಗ ರೆಡಿಯಾಗುತ್ತಾ ಇದೆ. ಬಳ್ಳಾರಿ ಜಿಲ್ಲೆಯ ಸ್ಕೂಲುಗಳ ಉಪಾಧ್ಯಾಯರ ಅಲೋಕೇಷನ್ ಸ್ಕೇಟ್‌ಮೆಂಟ್ ಆಗಿರಲಿಲ್ಲ ಅದನ್ನೂ ಕೂಡ ಈಗ ಮಾಡಿಸುತ್ತಿದ್ದೇವೆ.

Sri C. J. MUCKANNAPPA.—May I draw the attention of the Chair to Rule 41, Sir?

Mr. SPEAKER.—I have already got it here. I am going to deal with it. Why does the hon. member to disturb the question hour?

†Indicates that the speeches or remarks have not been revised by the member concerned.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಕ್ವೆಶ್ಚನ್ ಹಾಕಿದ ಮೇಲೆ ನಾನು ಈ ಸಭೆಯ ಸದಸ್ಯನಾಗಿ ತಮಗೆ ಹೇಳಿ ಕೊಳ್ಳಬೇಕು. ನಾನು ಸರ್ಕಾರಕ್ಕೆ ಹೇಳುತ್ತಾ ಇಲ್ಲ.

Mr. SPEAKER.—I have read it. I don't want it to be read. Does the hon. member want to adjourn the Question Hour ? I took the sense of the House. I know it should be furnished two hours earlier. Whatever the conventions may be, we are bound by the Rules. I am going to deal with it.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನನ್ನದು ಪರ್ಟಿಕ್ಯುಲರ್ ಡಿಫಿಕಲ್ಟಿ ಇದೆ. ಅದಕ್ಕೋಸ್ಕರ ನಾನು ತಮ್ಮನ್ನು ಪ್ರೆಸ್ ಮಾಡುತ್ತಿದ್ದೇನೆ.

Mr. SPEAKER.—When it comes to that, we will see.

Sri C. J. MUCKANNAPPA.—Regarding Questions Nos. 369, 640 and 644, there is some difficulty, Sir.

Mr. SPEAKER.—I will see to it.

ಶ್ರೀ ಕೆ. ದೇವಯ್ಯ.—ಡಿ. ಪಿ. ಐ ಆಫೀಸಿನಲ್ಲಿ ಈ ಕೆಲಸ ಮಾಡುವುದಕ್ಕೆ ಬೇಕಾದಷ್ಟು ಸಿಬ್ಬಂದಿ ಇಲ್ಲದೇ ಇರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಸ್. ಆರ್. ಕಂಠಿ.—ಕೆಲವಷ್ಟಿಗೆ ಸಿಬ್ಬಂದಿ ಇಲ್ಲ ಎಂಬುದು ಗೊತ್ತಿದೆ. ಆದರೂ ಇರುವವರಿಂದಲೇ ನಡೆಸುತ್ತಾ ಇದ್ದೇವೆ. ಬೆಂಗಳೂರು ಸಿಟಿಯಲ್ಲಿ ರೆಗ್ಯುಲರೈಸ್ ಆಗಿಲ್ಲ ಎಂಬುದು ನಮ್ಮ ಗಮನಕ್ಕೆ ಬಂದಿದೆ ; ನೋಡುತ್ತೇವೆ.

ಶ್ರೀ ಟಿ. ಮಾದಯ್ಯಗೌಡ.—ಏಡೆಡ್ ಸ್ಕೂಲುಗಳಲ್ಲಿ ಸರಿಯಾಗಿ ಸಂಬಳ ಸಾರಿಗೆ ಸಿಕ್ಕುತ್ತಿದೆಯೇ ? ಕೆಲಸ ಸರಿಯಾಗಿ ನಡೆಯುತ್ತಾ ಇದೆಯೇ, ಪಾಠ ಕ್ರಮ ಸರಿಯಾಗಿ ನಡೆಸುತ್ತಾ ಇದ್ದಾರೆಯೇ ಎಂಬುದನ್ನು ಇರಾಖೆಯವರು ಆಗಾಗ್ಗೆ ನೋಡ ತ್ತಾರೆಯೇ ?

ಶ್ರೀ ಎಸ್. ಆರ್. ಕಂಠಿ.—ಸರಿಯಾಗಿ ನಡೆಯುತ್ತಾ ಇದೆಯೇ ಇಲ್ಲವೇ ಎಂಬುದನ್ನು ನೋಡುತ್ತಾ ಇದ್ದಾರೆ. ಹಾಗೆ ಆಗುತ್ತಾ ಇಲ್ಲ ಎಂಬುದನ್ನು ಮಾನ್ಯ ಸದಸ್ಯರು ಗಮನಕ್ಕೆ ತಂದರೆ ವಿಚಾರ ಮಾಡು ತ್ತೇನೆ.

ಶ್ರೀಮತಿ ರತ್ನಮ್ಮ ಮಾಧವರಾವ್.—ನಿನ್ನೆ ದಿವಸ ಕೊಟ್ಟ ಉತ್ತರದಲ್ಲಿ ಬೆಂಗಳೂರು ಸಿಟಿಯಲ್ಲಿನ್ನೆ 31 ಹೈಸ್ಕೂಲುಗಳು ಇವೆ ಎಂದು ಇತ್ತು. ಇವತ್ತಿನ ದಿನದ ಉತ್ತರದಲ್ಲಿ 48 ಆಗಿದೆ. ಇದು ಇಷ್ಟು ಬೇಗ ಹೇಗೆ ಆಯಿತು ?

ಶ್ರೀ ಎಸ್. ಆರ್. ಕಂಠಿ.—ಅದು yearwar ಇರು ತ್ತದೆ. ನಿನ್ನೆ ಕೊಟ್ಟಿದ್ದು ಹೋದ ವರ್ಷದ್ದು ಇರ ಬೇಕು ; ಅದಕ್ಕೇ ಹಾಗೆ ಆಗುತ್ತದೆ.

ಶ್ರೀ ಟಿ. ಎಚ್. ಮಾದಪ್ಪಗೌಡ.—ಏಡೆಡ್ ಹೈಸ್ಕೂಲು ನಡೆಸುತ್ತಾ ಇರತಕ್ಕ ಸ್ಥಳದಲ್ಲಿ ನೀವು ಕೊಡತಕ್ಕ ಸಂಬಳದಲ್ಲಿ ಅರ್ಧದಷ್ಟು ಕೂಡ ಅವರು ಕೊಡುವುದಿಲ್ಲ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಸ್. ಆರ್. ಕಂಠಿ.—ಇಲ್ಲ, ನಮ್ಮ ಗಮನಕ್ಕೆ ತಾವು ಈಗ ತರುತ್ತಾ ಇದ್ದೀರಿ.

ಶ್ರೀ ಗಂಗಾಧರ ನಾಮೋಷಿ.—ಏಡೆಡ್ ಸ್ಕೂಲು ಗಳಲ್ಲಿ ಸರಿಯಾದ ರೀತಿಯಿಂದ ನಡೆಯದೇ ಇರುವುದಕ್ಕೆ ಕಾರಣವೇನೆಂದರೆ 9 ತಿಂಗಳು, ಒಂದು ವರ್ಷದ ಮೇಲೆ ಗ್ರಾಂಟು ಕೊಡುತ್ತೀರಿ ಅದಕ್ಕೇ ಉಪಾಧ್ಯಾ ಯರಿಗೆ ಸಂಬಳ ಕೊಡುವುದಕ್ಕಾಗುವುದಿಲ್ಲ ಎಂದು ಗುಲ್ಬರ್ಗಾದಿಂದ ಯಾವುದಾದರೂ ಹೈಸ್ಕೂಲಿನ ರೆಪ್ರಸೆಂಟೇಷ್ ಬಂದಿದೆಯೆ ?

ಶ್ರೀ ಎಸ್. ಆರ್ ಕಂಠಿ.— ಇಲ್ಲ.

ಶ್ರೀ ಗಾಂಜಿ ವೀರಪ್ಪ.—ಟ್ರಿಪ್ಪರ್ ಬೆನಿಫಿಟ್ ಸ್ಕೀಂ ಅನ್ನು ಏಡೆಡ್ ಸ್ಕೂಲುಗಳವರಿಗೆ ಕೊಡುವಂತೆ ಸರ್ಕಾರಿ ಸ್ಕೂಲುಗಳವರಿಗೂ ಕೊಡುತ್ತೀರಾ ?

ಶ್ರೀ ಎಸ್. ಆರ್ ಕಂಠಿ.—ಸರ್ಕಾರಿ ಸ್ಕೂಲುಗಳ ವರಿಗೆ ಕೊಡಲು ಕಾರಣವಿಲ್ಲ. ಏಡೆಡ್ ಸ್ಕೂಲಿನವರಿಗೆ ಕೊಡಬೇಕೆಂದು ಯೋಚನೆ ಮಾಡಿದ್ದೇವೆ. ಇದಕ್ಕಾಗಿ ಒಬ್ಬ ಸ್ಪೆಷಲ್ ಆಫೀಸರನ್ನು ನೇಮಕ ಮಾಡಲಾಗಿತ್ತು. ಅವರು ರಿಪೋರ್ಟ್ ಕೊಟ್ಟಿದ್ದಾರೆ. ಅದನ್ನು ಸರ್ಕಾರದವರು ಪರಿಶೀಲನೆ ಮಾಡುತ್ತಾ ಇದ್ದಾರೆ.

ಶ್ರೀ ಎಸ್. ಶಿವಪ್ಪ.—(ಸಿ) ಪ್ರಶ್ನೆಗೆ ಉತ್ತರವಾಗಿ 'ಇಲ್ಲ' ಎಂದು ಹೇಳಿದ್ದೀರಿ. ಎಂದರೆ ಸರ್ಕಾರಿ ಶಾಲೆ ಗಳಿಗೂ ಖಾಸಗೀ ಶಾಲೆಗಳಿಗೂ ಇರತಕ್ಕ ಸಂಬಳದ ವ್ಯತ್ಯಾಸ ತಮಗೆ ಗೊತ್ತಿಲ್ಲ ಎಂದು ಹೇಳಿದ್ದೀರಿ. ತಾವು ಖಾಸಗಿ ಶಾಲೆಗೆ ಅಧಿಕೃತವಾದ ಮುದ್ರೆಯನ್ನು ಕೊಡತಕ್ಕ ಕಾಲದಲ್ಲಿ ಖಾಸಗಿ ಶಾಲೆಗಳಲ್ಲಿ ಸಂಬಳದ ಮತ್ತು ಇತರ ರೀತಿಯ ಸ್ಕೌರ್ಯಗಳು ಒಂದು ಮಟ್ಟದಲ್ಲಿ ಇರಬೇಕೆನ್ನುವ ನಿಯಮ ಇಲ್ಲವೆ ?

ಶ್ರೀ ಎಸ್. ಆರ್. ಕಂಠಿ.—ಸರ್ಕಾರಿ ಶಾಲೆಯಲ್ಲಿರುವ ತಕ್ಕ ಶಿಕ್ಷಕರಿಗೂ ಪ್ರೈವೇಟ್ ಶಾಲೆಗಳಲ್ಲಿರತಕ್ಕ ಶಿಕ್ಷಕರಿಗೂ ಸಂಬಳ ಒಂದೇ ಆಗಿದೆ. ಆದರಲ್ಲಿ ವ್ಯತ್ಯಾಸವಿಲ್ಲ. ವ್ಯತ್ಯಾಸವಿರುವುದು ಎಲ್ಲಿ ಎಂದರೆ ಸರ್ಕಾರಿ ಶಾಲೆಗಳಲ್ಲಿರುವಂಥ ಶಿಕ್ಷಕರಿಗೆ ಪೆಕ್ಷನ್ ಸಿಕ್ಕುತ್ತದೆ. ಪ್ರೈವೇಟ್ ಶಾಲೆಗಳಲ್ಲಿರುವಂಥ ಶಿಕ್ಷಕ ರಿಗೆ ಟ್ರಿಪ್ಪರ್ ಬೆನಿಫಿಟ್ ಸ್ಕೀಂ ಪ್ರಕಾರ ಪ್ರಾವಿಡೆಂಟ್ ಫಂಡ್, ಇನ್ಷೂರೆನ್ಸ್ ಕೆಲಮಟ್ಟಿಗೆ ಪೆಕ್ಷನ್ ಸಿಕ್ಕುತ್ತದೆ.

ಶ್ರೀ ಕೆ. ಎಚ್. ರಂಗನಾಥ್.—(ಸಿ) ಪ್ರಶ್ನೆಗೆ ಉತ್ತರವಾಗಿ 'no' ಎಂದು ಹೇಳಿದ್ದೀರಿ. ಸ್ಕೂಲ್ ಇನ್‌ಸ್ಪೆಕ್ಟರುಗಳಾಗಲೀ ಡಿ. ಇ. ಓ ಆಗಲೀ ನಿಯಮಿತವಾಗಿ ಸಂಬಳ ಕೊಡುತ್ತಿದ್ದಾರೆ ಎಂದು ರಿಪೋರ್ಟ್ ಮಾಡಿ ದ್ದಾರೆಯೆ ?

ಶ್ರೀ ಎಸ್. ಆರ್. ಕಂಠಿ.—ಸರಿಯಾಗಿ ಸಂಬಳ ಸಿಕ್ಕುವುದಿಲ್ಲ ಎಂಬ ಮಾತು ಸರ್ಕಾರದವರ ಗಮನಕ್ಕೆ ಬಂದಿಲ್ಲ.

ಶ್ರೀ ಐ. ನಾರಾಯಣಗೌಡ.—ಏಡೆಡ್ ಹೈಸ್ಕೂಲು ಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ ಎನ್ನುವ ಸಂದರ್ಭಗಳಲ್ಲಿ ಸರ್ಕಾರದವರು ಅಂತಹ ಸ್ಕೂಲು ಗಳನ್ನಾವುದಾದರೂ ವಹಿಸಿಕೊಂಡು ನಡೆಸುತ್ತಾ ರೆಯೇ ?

ಶ್ರೀ ಎಸ್. ಆರ್. ಕಂಠಿ.—ಇಂತಹ ಜನರರ್ ಪ್ರಶ್ನೆಗೆ ಉತ್ತರ ಕೊಡುವುದಕ್ಕಾಗುವುದಿಲ್ಲ. ನಿರ್ದಿಷ್ಟ ವಾದ ಪ್ರಶ್ನೆ ಕೇಳಿದ್ದರೆ ಉತ್ತರ ಕೊಡುವುದಕ್ಕೆ ಆಗುತ್ತದೆ.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಗ್ರಾಂಟ್ ಕೊಡು ವಾಗ ಗ್ರಾಮಾಂತರ ಪ್ರದೇಶಕ್ಕೆ 85, ಪಟ್ಟಣಗಳಲ್ಲಿ ಆದರೆ 80, ತಾಲ್ಲೂಕು ಬೋರ್ಡು ಆದರೆ 90 ಎಂದು ಮಾಡಿರುವುದರ ಉದ್ದೇಶವೇನು ?

ಶ್ರೀ ಎಸ್. ಆರ್. ಕಂಠಿ. ತಾಲ್ಲೂಕು ಬೋರ್ಡಿಗೆ ಹೆಚ್ಚಿನ ಭಾರ ಬೀಳದಾರದು ಎಂಬ ದೃಷ್ಟಿಯಿಂದ ಆ ರೀತಿ ಮಾಡಿದ್ದಾಗಿದೆ. ಆ ಬಗ್ಗೆ ಒಂದು ಕಮಿಟಿಯನ್ನು ನಿಯಮಿಸಲಾಗಿತ್ತು. ಆ ಕಮಿಟಿಯ ಶಿಫಾರಸನ್ನು ಸರ್ಕಾರದವರು ಅನುಸರಿಸಿದ್ದಾರೆ.

ಶ್ರೀ ಜಿ. ಮಾದಯ್ಯಗೌಡ.—ಪ್ರೈವೇಟ್ ಸ್ಕೂಲು ಗಳಿಗೆ ಗ್ರಾಂಟ್ ಕೊಡುವಾಗ ಅವರು ಏನು ಲೆಕ್ಕ ಕೊಡುತ್ತಾರೆ ಅದರ ಮೇಲೆ ಸ್ವಲ್ಪ ಭಾಗ ಕೊಡುತ್ತೀರಿ. ಅವರು ಒದಗಿಸತಕ್ಕ ಲೆಕ್ಕ ಕ್ರಮವಾಗಿದೆಯೇ ಅಥವಾ ಅದು ಬೋಗಸ್ಸೇ ಎಂಬುದನ್ನು ಪರಿಶೀಲನೆ ಮಾಡುತ್ತೀರಾ ?

ಶ್ರೀ ಎಸ್. ಆರ್. ಕಂಠಿ.—ಕ್ರಮವಾಗಿದೆಯೋ, ಬೋಗಸ್ಸೋ ಎಂಬುದನ್ನು ಆಫೀಸಿನಲ್ಲಿ ನೋಡಿಕೊಂಡೇ ಅವರಿಗೆ ಗ್ರಾಂಟ್ ಕೊಡುತ್ತಾ ಇರುವುದು.

ಶ್ರೀ ಎಸ್. ಶಿವಪ್ಪ.—ಕೆಲವು ಖಾಸಗಿ ಶಾಲೆಗಳಲ್ಲಿ ಸಂಬಳ ಸಾರಿಗೆಯನ್ನು ಸರಿಯಾಗಿ ಕೊಡದೇ ಅಲ್ಲಿರತಕ್ಕ ಅಧ್ಯಾಪಕರಿಗೆ ಅವರ ಜೀವನಕ್ಕೆ ಬಹಳ ತೊಂದರೆಯಾಗಿರುವುದು ಮತ್ತು ಶಾಲೆಗಳವರು ಸರ್ಕಾರದವರ ಪ್ರಭಾವವನ್ನು ಹೆಚ್ಚಾಗಿ ಹೊಂದಿರತಕ್ಕ ಕಾರಣದಿಂದ ಅಧ್ಯಾಪಕರ ಕಷ್ಟನುಷ್ಟ ನಿವಾರಣೆಯಾಗದೇ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಶ್ರೀ ಎಸ್. ಆರ್. ಕಂಠಿ.—ಅಂಥಾ ಕೇಸುಗಳು ಯಾವುವಾದರೂ ಇದ್ದರೆ, ಮಾನ್ಯ ಸದಸ್ಯರು ಹೇಳಬೇಕು. ಅದನ್ನು ನೋಡಿಸುತ್ತೇನೆ ಎಂದು ಆಗಲೇ ಉತ್ತರ ಹೇಳಿದ್ದೇನೆ.

Sri G. DUGGAPPA.—May I know from the Government whether the benefit of pension, gratuity and insurance to the teachers of the aided schools will be given from the current year ?

ಶ್ರೀ ಎಸ್. ಆರ್. ಕಂಠಿ.—ಅದನ್ನು ಯಾವ ಕಾಲದಿಂದ ಕೊಡಲಾಗುತ್ತದೆ ಎಂಬುದನ್ನು ಈಗ ಹೇಳುವುದಕ್ಕಾಗುವುದಿಲ್ಲ. ಏಕೆಂದರೆ ಅದನ್ನು ಸರ್ಕಾರದವರು ಯೋಚನೆ ಮಾಡುತ್ತಾ ಇದ್ದಾರೆ.

ಶ್ರೀ ಎ. ಎಂ. ದೇವ್.—ಏಡೆಡ್ ಸ್ಕೂಲ್ ಟೀಚರ್ಸ್‌ಗೆ ಚೆಕ್ ಮುಖಾಂತರ ಅವರ ಅಕೌಂಟ್‌ಗೆ ಸಂಬಳ ಕೊಡುವ ಹಾಗೆ ತಾವು ಏರ್ಪಾಡು ಮಾಡುತ್ತೀರಾ ?

ಶ್ರೀ ಎಸ್. ಆರ್. ಕಂಠಿ.—ಆದೂ ಒಂದು ಸೂಚನೆ ಇದೆ, ಅದನ್ನು ಗಮನದಲ್ಲಡಲಾಗುವುದು.

ಶ್ರೀಮತಿ ನಾಗರತ್ನಮ್ಮ ಹಿರೇಮಠ್.—ನಮ್ಮ ಸಂಸ್ಥಾನದ ಇತರ ಪ್ರದೇಶಗಳಲ್ಲಿ 489 ಹೈಸ್ಕೂಲುಗಳು, 70 ಮಿಡ್ಲ್ ಸ್ಕೂಲುಗಳು ಇವೆ ಎಂದು ಹೇಳಿದ್ದೀರಿ. ಇದು ಸರಿಯೇ? ಮಾಧ್ಯಮಿಕ ಶಾಲೆಗಳು ಕಡಮೆ ಇದ್ದು, ಹೈಸ್ಕೂಲುಗಳು ಜಾಸ್ತಿ ಇರಲಕ್ಕೆ ಕಾರಣವೇನು ?

ಶ್ರೀ ಎಸ್. ಆರ್. ಕಂಠಿ.—489 ಹೈಸ್ಕೂಲುಗಳು ಏಡೆಡ್ ಸ್ಕೂಲುಗಳು ಇವೆ. ಸರ್ಕಾರಿ ಸ್ಕೂಲುಗಳು ಮತ್ತೆ ಬೇರೆ ಇವೆ ; ಮುನಿಸಿಪಲ್ ಹೈಸ್ಕೂಲುಗಳು ಇವೆ, ಡಿಸ್ಟ್ರಿಕ್ಟ್ ಬೋರ್ಡ್ ಹೈಸ್ಕೂಲುಗಳು ಇವೆ. ಹೀಗೆಲ್ಲಾ ಬೇರೆ ಬೇರೆ ತರಹದ ಹೈಸ್ಕೂಲುಗಳು ಇವೆ. ಕೆಲವು un-aided ಸ್ಕೂಲುಗಳೂ ಕೂಡ ಇವೆ.

ಶ್ರೀಮತಿ ಸುಶೀಲಾ ಬಾಯಿ ಹೀರಾಚಂದ ಪಾ.—ಬಿಜಾಪುರ ಡಿಸ್ಟ್ರಿಕ್ಟ್ ಬಾಗೇವಾಡಿಯಲ್ಲಿ ಮೊದಲು ಒಂದು ಡಿ. ಎಲ್. ಬಿ. ಸ್ಕೂಲು ನಡೆಸುತ್ತಾ ಇದ್ದರು ಈಗ ತಾಲ್ಲೂಕು ಬೋರ್ಡ್ ಸ್ಕೂಲಾಗಿ ಮಾಡಿದ್ದಾರೆ, ಅದನ್ನು ಸರ್ಕಾರದವರೇ ತೆಗೆದುಕೊಳ್ಳಬೇಕೆಂದು ವಿನಂತಿ ಮಾಡಿದ್ದರು ; ಅದರ ಬಗ್ಗೆ ಏನು ವಿಚಾರ ಮಾಡಿದ್ದೀರೀ ?

ಶ್ರೀ ಎಸ್. ಆರ್. ಕಂಠಿ.—ಸರ್ಕಾರದವರು ಅದರ ವಿಚಾರದಲ್ಲಿ ಒಂದು ನಿರ್ಣಯಕ್ಕೆ ಬಂದಿದ್ದಾರೆ. ಡಿಸ್ಟ್ರಿಕ್ಟ್ ಬೋರ್ಡ್ ಸ್ಕೂಲ್ ಯಾವುದು ಇದೆ ಅದನ್ನು ತಾಲ್ಲೂಕು ಬೋರ್ಡುಗಳು ತೆಗೆದುಕೊಳ್ಳಬೇಕು. ಒಂದು ವೇಳೆ ಅವರು ತೆಗೆದುಕೊಳ್ಳದಿದ್ದರೆ ಅದನ್ನು ಡಿ. ಸಿ. ಅವರೇ ನಡೆಸಬೇಕು. ಮತ್ತು ಎಷ್ಟು ಡಿಫರೆನ್ಸ್ ಇದೆ—15%ಆಗಲೀ 20%ಆಗಲಿ—ಅದನ್ನು ಕೊಡಬೇಕೆಂದು ನಿಯಮ ಇವೆ. ಈ ಪ್ರಕಾರ ಅದು ಲೋಕರ್ ಬೋರ್ಡ್ ಮೇಲೆ ಚಾರ್ಜ್ ಆಗುತ್ತದೆ. ಎಲ್ಲಿಯವರೆಗೆ ಪ್ರೈವೇಟ್ ಏಜೆನ್ಸಿ ಆಗಲೀ ಮತ್ತೊಂದಾಗಲೀ ಮುಂದೆ ಬರುವುದಿಲ್ಲವೋ ಅಲ್ಲಿಯತನಕ ಈ ಸಿಸ್ಟಂ ಹಾಗೆಯೇ ಮುಂದುವರಿಯುತ್ತದೆ.

Sri S. RAJAGOPAL.—It is stated here that in Bangalore City there are 66 Middle Schools and 553 teachers and in other places 70 Middle Schools and 442 teachers only. May I know why lesser schools have more teachers and more schools have lesser teachers ?

ಶ್ರೀ ಎಸ್. ಆರ್. ಕಂಠಿ.—ಮಿಡ್ಲ್ ಸ್ಕೂಲುಗಳಲ್ಲಿ ಪ್ರತಿಯೊಂದು ಕ್ಲಾಸ್‌ನಲ್ಲೂ ಹುಡುಗರ ಸಂಖ್ಯೆ ಜಾಸ್ತಿ ಇರುತ್ತದೆ. ದೊಡ್ಡ ಊರಾದರೆ ಹುಡುಗರ ಸಂಖ್ಯೆ ಜಾಸ್ತಿ ಇರುತ್ತದೆ; ಹೆಚ್ಚಿನ ಜನ ಟೀಚರ್ಸ್ ಇರುತ್ತಾರೆ. ಸಣ್ಣ ಊರಾದರೆ ಹುಡುಗರ ಸಂಖ್ಯೆ ಕಡಮೆ ಇರುತ್ತದೆ, ಕಡಮೆ ಜನ ಟೀಚರ್ಸ್ ಇರುತ್ತಾರೆ.

ಶ್ರೀ ಗಾಂಜಿ ವೀರಪ್ಪ.—ಏಡೆಡ್ ಸ್ಕೂಲುಗಳನ್ನು ತಾಲ್ಲೂಕು ಬೋರ್ಡ್‌ನವರು ವಹಿಸಿಕೊಂಡು ಅವರಿಗೆ ಇರತಕ್ಕ ರಿಸೋರ್ಸ್‌ಸ್‌ನಲ್ಲಿ ಅವನ್ನು ನಡೆಸುವುದಕ್ಕೆ ಸಾಧ್ಯವಿಲ್ಲ ಎಂಬುದು ಗೊತ್ತೇ ?

ಶ್ರೀ ಎಸ್. ಆರ್. ಕಂಠಿ.—ಏಡೆಡ್ ಅಲ್ಲ ಡಿಸ್ಟ್ರಿಕ್ಟ್ ಬೋರ್ಡ್ ಸ್ಕೂಲುಗಳನ್ನು ಮಾತ್ರ ಅವರಿಗೆ ವಹಿಸಬೇಕೆಂದು ಇದೆ. ಈಗ ಸರ್ಕಾರದ ಅನುಭವವೇನೆಂದರೆ ಕೆಲವು ಕಡೆ ತಾಲ್ಲೂಕು ಬೋರ್ಡಿನವರು ತೆಗೆದು ಕೊಳ್ಳುವುದಕ್ಕೆ ಮುಂದೆ ಬಂದಿದ್ದಾರೆ. ಅಷ್ಟೇ ಅಲ್ಲದೆ ಹೊಸ ಶಾಲೆಗಳನ್ನು ಕೂಡ ಕೇಳುತ್ತಾ ಇದ್ದಾರೆ.

Sri G. V. GOWDA.—May I know whether these teachers working in aided schools are promoted as in Government departments ?

ಶ್ರೀ ಎಸ್. ಆರ್. ಕಂಠಿ.—ರೂಲ್ಸ್ ಪ್ರಕಾರ ಆಗಲೇ ಬೇಕು.

ಶ್ರೀ ಜಿ. ಎ. ಗೌಡ.—ಹಾಗೆ ಆಗದಿರುವುದು ಗಮನಕ್ಕೆ ಬಂದಿದೆಯೇ ?

ಶ್ರೀ ಎಸ್. ಆರ್. ಕಂಠಿ.—ಬಂದಿಲ್ಲ, ಸಂದರ್ಭ ಹೇಳಿದರೆ ವಿಚಾರ ಮಾಡುತ್ತೇನೆ.

ಶ್ರೀ ಗಾಂಜಿ ವೀರಪ್ಪ.—ಈಗ ತಾಲ್ಲೂಕ್ ಬೋರ್ಡಿಗೆ ವಹಿಸಿದರೆ ಅಡೀಷನಲ್ ಗ್ರಾಂಟ್ ಕೊಡುತ್ತೀರಾ ?

ಶ್ರೀ ಎಸ್. ಆರ್. ಕಂಠಿ.—ಒಂದಕ್ಕಿಂತ ಜಾಸ್ತಿ ಇದ್ದರೆ ಸೇಕಡ 90 ಭಾಗ ಸರ್ಕಾರ ಕೊಡುವುದಾಗಿ ಒಪ್ಪಿದೆ.

ಶ್ರೀ ಬಿ. ಭಾಸ್ಕರಶೆಟ್ಟಿ.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಜಾಮಾಡಿರುವ ಜಿಲ್ಲಾ ಬೋರ್ಡಿಗೆ ಸಂಬಂಧಪಟ್ಟ ಪ್ರೈಮರಿ ಮತ್ತು ಮಾಧ್ಯಮಿಕ ಶಾಲೆಗಳ ಉಪಾಧ್ಯಾಯರಿಗೆ ಮೂರು ನಾಲ್ಕು ತಿಂಗಳ ಸಂಬಳ ಬಾಕಿಯಿದೆ, ಸರಿಯಾಗಿ ಸಂಬಳ ಪಾವತಿಯಾಗುವಂತೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎಸ್. ಆರ್. ಕಂಠಿ.—ಸ್ವಲ್ಪ ದಿವಸಗಳ ಹಿಂದೆ ಅವರಿಗೆ ಕೊಡುವುದಕ್ಕಾಗಿ ಒಂಬತ್ತು ಲಕ್ಷ ರೂಪಾಯಿಗಳನ್ನು ಮಂಜೂರುಮಾಡಿದೆ, ಕೊಡುತ್ತಾರೆ.

ಶ್ರೀ ಜಿ. ದುಗ್ಗಪ್ಪ.—ಕೆಲವು ಮುನಿಸಿಪಾಲಿಟಿಗಳವರು ಶಾಲೆಯನ್ನು ನಡೆಸಲು ಸಾಧ್ಯವಾಗದೆ ತೊಂದರೆಪಡುತ್ತಿದ್ದಾರೆ. ಅಂಥ ಶಾಲೆಗಳನ್ನು ತಾಲ್ಲೂಕ್ ಬೋರ್ಡಿಗೆ ವಹಿಸಿದರೆ ಗ್ರಾಂಟು ಕೊಡುತ್ತೀರಾ ?

ಶ್ರೀ ಎಸ್. ಆರ್. ಕಂಠಿ.—ಅಂಥ ನಿದರ್ಶನಗಳು ಗಮನಕ್ಕೆ ಬಂದರೆ ಯೋಚನೆ ಮಾಡುತ್ತೇವೆ.

ಶ್ರೀ ಗೋಪಾಲ ಸಾರೆನ್ನ.—ಹಳ್ಳಿಗಳಲ್ಲಿ ಉಪಾಧ್ಯಾಯರಿಗೆ ವಸತಿ ಸೌಕರ್ಯವಿಲ್ಲದೆ ಬಹಳ ತೊಂದರೆಯಿದೆ. ಪಟ್ಟಣಗಳಲ್ಲಿ ಸರ್ಕಾರದವರು ಮನೆಗಳನ್ನು ಕಟ್ಟಿಸಿ ಕೊಟ್ಟಿದ್ದಾರೆ. ಅದೇ ರೀತಿ ಹಳ್ಳಿಗಳಲ್ಲೂ ವಸತಿಗೆ ಏರ್ಪಾಡು ಮಾಡಲು ಸರ್ಕಾರ ಕ್ರಮ ಕೈಕೊಂಡಿದೆಯೇ ?

ಶ್ರೀ ಎಸ್. ಆರ್. ಕಂಠಿ.—ಈಗ ಮೂರನೆಯ ಯೋಜನೆಯ ಅವಧಿಯಲ್ಲಿ ಉಪಾಧ್ಯಾಯನಿಯರಿಗೆ ವಸತಿ ಸೌಕರ್ಯ ಕಲ್ಪಿಸುವ ಯೋಚನೆಯಿದೆ. ಆದರೆ ಉಪಾಧ್ಯಾಯರ ವಿಚಾರದಲ್ಲಿ ಅಂಥ ಯೋಚನೆಯಿಲ್ಲ.

ಶ್ರೀ ಎಸ್. ಶಿವಪ್ಪ.—489 ಖಾಸಗಿ ಹೈಸ್ಕೂಲುಗಳ ಪೈಕಿ ಜಾತಿಯ ಆಧಾರದ ಮೇರೆ ನಡೆಯಿತಕ್ಕವು ಎಷ್ಟು ? ಮಠಗಳು ನಡೆಸತಕ್ಕವು ಎಷ್ಟು ?

ಶ್ರೀ ಎಸ್. ಆರ್. ಕಂಠಿ.—ಈಗ ಏಡೆಡ್ ಶಾಲೆಗಳು, ಬೋರ್ಡ್ ನಡೆಸತಕ್ಕವು ಮತ್ತು ಸರ್ಕಾರಿ ಶಾಲೆಗಳು ಎಂಬು ಮೂರು ಬಗೆ ಶಾಲೆಗಳಿವೆ. ಏಡೆಡ್ ಶಾಲೆಗಳಲ್ಲಿ ಮಠ ಅಥವಾ ಸಂಸ್ಥೆಗಳು ನಡೆಸುವ ಶಾಲೆಗಳಿರಬಹುದು.

Sri G. V. GOWDA.—Is there any scheme before the Government to depute these untrained graduate teachers working in the aided institutions for training ?

ಶ್ರೀ ಎಸ್. ಆರ್. ಕಂಠಿ.—ಅದನ್ನು ವಿಚಾರ ಮಾಡಲಾಗುತ್ತದೆ.

ಶ್ರೀ ಎಸ್. ಗೋಪಾಲಗೌಡ.—ಸೋರಾಪುರದ ಸ್ಕೂಲ್ ಬೋರ್ಡಿನ ಉಪಾಧ್ಯಾಯರು ಬಿಜಾಪುರ ಸ್ಕೂಲ್ ಬೋರ್ಡಿಗೆ ಬಂದಿದ್ದಾರೆ ಅವರಿಗೆ ಅನ್ಯಾಯವಾಗಿರುವುದು ಗೊತ್ತೆ ?

ಶ್ರೀ ಎಸ್. ಆರ್. ಕಂಠಿ.—ಈ ವಿಚಾರ ಗೊತ್ತಿಲ್ಲ, ತಾವೇ ಮೊದಲು ಹೇಳುತ್ತಿರುವುದು.

ಶ್ರೀ ಇ. ನಾರಾಯಣಗೌಡ.—ಸರ್ಕಾರ ತಾನು ಕೊಡಬೇಕಾದ ಗ್ರಾಂಟನ್ನು ಅನೇಕ ಸಂದರ್ಭಗಳಲ್ಲಿ ವರ್ಷಾಖ್ಯೆರಿನಲ್ಲಿ, ಮಾರ್ಚಿಯಲ್ಲಿ ಏಡೆಡ್ ಸಂಸ್ಥೆಗಳಿಗೆ ಕೊಡುವುದರಿಂದ ಕೆಲವರಿಗೆ ಸಕಾಲದಲ್ಲಿ ಸಂಬಳ ದೊರೆಯದೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಎಸ್ ಆರ್. ಕಂಠಿ.—ಅದನ್ನು ತೀವ್ರವಾಗಿ ಕೊಡುವಂತೆ ವಿಚಾರ ಮಾಡಲಾಗುತ್ತದೆ.

ಶ್ರೀ ಎಸ್. ಗೋಪಾಲಗೌಡ.—ಸೋರಾಪುರದ ಶಾರಾ ಬೋರ್ಡಿನ ಹೈಸ್ಕೂಲಿನಲ್ಲಿ ಕೆಲಸ ಮಾಡುವ ಉಪಾಧ್ಯಾಯರು ಬಿಜಾಪುರದ ಶಾರಾ ಬೋರ್ಡಿಗೆ ಬಂದಮೇರೆ ಅವರಿಗೆ ಅನ್ಯಾಯವಾಗಿದೆಯೆಂದು ಮನವಿ ಬಂದಿದೆಯೆ ? ಇದನ್ನು ವಿಚಾರ ಮಾಡುತ್ತೀರಾ ?

ಶ್ರೀ ಎಸ್. ಆರ್. ಕಂಠಿ.—ತಾವು ಹೇಳುವ ವಿಚಾರ ಅರ್ಥವಾಗಲಿಲ್ಲ. ಬಿಜಾಪುರದ ಸ್ಕೂಲ್ ಬೋರ್ಡಿಗೆ ಸಂಬಂಧಪಟ್ಟಂತೆ ಒಂದೇ ಒಂದು ಹೈಸ್ಕೂಲು ಬಾಗೆವಾಡಿಯಲ್ಲಿದೆ, ಬೇರೆ ಯಾವುದೂ ಇಲ್ಲ. ಪ್ರೈಮರಿ ಶಾಲೆಯ ವಿಚಾರ ಮಾನ್ಯ ಸದಸ್ಯರು ಹೇಳುತ್ತಿರಬಹುದು. ಆ ವಿಚಾರ ಗೊತ್ತಿಲ್ಲ. ನನಗೆ ಅಲ್ಲಿನ ಸ್ಕೂಲ್ ಬೋರ್ಡಿನ ಧರ್ಮದರ್ಶಿಗಳ ಪರಿಚಯವಿದೆ. ಅವರೂ ಸಹ ಹೇಳಲಿಲ್ಲ.

ಶ್ರೀ ಟಿ. ಮಾದಯ್ಯಗೌಡ.—ಗ್ರಾಂಟ್ ಇನ್-ಎಡ್ ಕೋಡ್ ಪ್ರಕಾರ ಖಾಸಗಿ ಸಂಸ್ಥೆಗಳಿಗೆ ಸರ್ಕಾರ ಕೊಡುವುದನ್ನು ಸರಿಯಾಗಿ ಕೊಟ್ಟು ಅವನ್ನು ದಕ್ಷತೆಯಿಂದ ನಡೆಸಬೇಕು, ಗ್ರಾಂಟ್-ಇನ್-ಏಡ್ ಕೋಡ್ ರಿವಿಷ್ ಆಗಬೇಕೆಂದು ಅನೇಕ ಬೇಳೆ ಸರ್ಕಾರದಲ್ಲಿ ಪ್ರಾರ್ಥನೆ ಮಾಡಿದ್ದೆವು. ಆ ವಿಚಾರವೇನಾಯಿತು ?

ಶ್ರೀ ಎಸ್. ಆರ್. ಕಂಠಿ.—ಈಗ ಪ್ರೈಮರಿ ಶಾಲೆಗಳಿಗೇ ಒಂದು, ಹೈಸ್ಕೂಲುಗಳಿಗೇ ಒಂದು, ಕಾಲೇಜುಗಳಿಗೇ ಒಂದು ಹೀಗೆ ಮೂರು ಗ್ರಾಂಟ್-ಇನ್-ಏಡ್ ಕೋಡ್ಸ್ ಇವೆ. ಹೈಸ್ಕೂಲು ವಿಚಾರ ಫೈನಲೈಜ್ ಮಾಡಿದ್ದೇವೆ. ಕೆಲವು ಸೂಚನೆಗಳು ಬಂದಿದ್ದುವು. D.P.I. ಸಂಬಂಧಪಟ್ಟ ಎಲ್ಲರೊಡನೆಯೂ ಮಾತನಾಡಿ ಆಖೈರು ನಿರ್ಧಾರಕ್ಕೆ ಬಂದಿದ್ದಾರೆ. ಪ್ರೈಮರಿ ಶಾಲೆಗಳಿಗೆ ಸಂಬಂಧಪಟ್ಟ ಕೋಡ್ ಮೈಸೂರು, ಮದ್ರಾಸು, ಬೊಂಬಾಯಿ, ಹೈದರಾಬಾದು ಮತ್ತು ಕೊಡಗು ಈ ಭಾಗಗಳ ಪ್ರದೇಶದಲ್ಲಿ ಬೇರೆ ಬೇರೆ ರೀತಿಯಲ್ಲಿದೆ. ಹಾಗಿರುವುದರಿಂದ ಇವೆಲ್ಲ ಪ್ರದೇಶಗಳಿಗೂ ಅನ್ವಯಿಸುವಂತೆ ಒಂದೇ ಒಂದು ಕೋಡ್ ಮಾಡಲು ಸರ್ಕಾರ ವಿಚಾರ ಮಾಡುತ್ತಿದೆ. ಕೆಲಸ ನಡೆದಿದೆ. ಇಷ್ಟರಲ್ಲೇ ಆಗುವ ಸಂಭವವಿದೆ.

ಶ್ರೀ ಕೆ. ದೇವಯ್ಯ.—2,400 ರೂಪಾಯಿಗಳೊಳಗೆ ಸಂಪಾದನೆ ಇರುವ ಜನರ ಮಕ್ಕಳಲ್ಲಿ ಸೇಕಡ 75 ಮಂದಿ ಖಾಸಗಿ ಹೈಸ್ಕೂಲುಗಳಲ್ಲಿರುವುದರಿಂದ ಅವರಿಗೆ ಬರಬೇಕಾದ ಶುಲ್ಕದ ಹಣ ಇನ್ನೂ ಪರೆಗೆ ಸರ್ಕಾರದಿಂದ ಬಂದಿಲ್ಲ. ಇದರಿಂದ ಶಾಲೆ ನಡೆಸಲು ತೊಂದರೆಯಾಗಿರುವುದು ಗಮನಕ್ಕೆ ಬಂದಿದೆಯೆ ?

ಶ್ರೀ ಎಸ್. ಆರ್. ಕಂಠಿ.—ಆ ಪ್ರಶ್ನೆಗೆ ಉತ್ತರ ಹೇಳಿದ್ದಾಗಿದೆ. ಕ್ಯಾರ್ಯರ್ಲ್ ಪೇಮೆಂಟ್ ಇತ್ತು. ಈಗ ಮುಂಚೆಯೇ ಕೊಡಬೇಕೆಂದು ಆರ್ಡರಾಗಿದೆ.

ಶ್ರೀಮತಿ ಬಸವರಾಜೇಶ್ವರಿ.—ಪೆಕೆಂಡರಿ ಶಾಲೆಯನ್ನು ಖಾಸಗಿಯವರು ತೆಗೆದರೆ ಗ್ರಾಂಟ್ ಪಡೆಯಲು 5,000 ರೂಪಾಯಿಗಳನ್ನು ಡಿಪಾಜಿಟ್ ಮಾಡಬೇಕು ಎಂದು ಗೊತ್ತುಮಾಡಿರುವುದರಿಂದ ಖಾಸಗಿ ಸಂಸ್ಥೆಗಳಿಗೆ ತೊಂದರೆಯಾಗುತ್ತಿದೆಯೆಂದು ಅರಿಕೆ ಮಾಡಿರುವುದು ಗಮನಕ್ಕೆ ಬಂದಿದೆಯೆ ?

ಶ್ರೀ ಎಸ್. ಆರ್. ಕಂಠಿ.—ಅದನ್ನು ವ್ಯತ್ಯಾಸ ಮಾಡುವುದು ಕಷ್ಟ, ಏಕೆಂದರೆ ಐದು ಸಾವಿರ ಎಂದು ಗೊತ್ತುಮಾಡಿರುವುದಕ್ಕೆ ಕಾರಣ ಸಂಬಳ ಸರಿಯಾಗಿ ಕೊಡುತ್ತಿಲ್ಲ, ಶಾಲೆ ಸರಿಯಾಗಿ ನಡೆಸುತ್ತಿಲ್ಲ ಎಂಬ ದೂರುಗಳು ಬಾರದಂತೆ ಮಾಡುವುದು ಸರ್ಕಾರದ ಉದ್ದೇಶ. ಎಷ್ಟೋಕಡೆ ಉಪಾಧ್ಯಾಯರಿಗೆ ಸಕಾಲದಲ್ಲಿ ಸಂಬಳ ಸಿಕ್ಕುವುದಿಲ್ಲ. ಆದುದರಿಂದ ಕಡಮೆ ಮಾಡುವುದು ಕಷ್ಟವಾಗಿದೆ.

ಶ್ರೀಮತಿ ಬಸವರಾಜೇಶ್ವರಿ.—489 ಖಾನಗಿ ಹೈಸ್ಕೂಲುಗಳ ಹೈಕಿ ಎಷ್ಟು ನಮ್ಮ ಭಾಗದ ಮೂರು ಜಿಲ್ಲೆಗಳಲ್ಲಿವೆ ?

ಶ್ರೀ ಎಸ್. ಆರ್. ಕಂಠಿ.—131 ಇವೆ, ಅದರಲ್ಲಿ ಎರಡು ಸರ್ಕಾರಿ ಶಾಲೆಗಳು, ಎರಡು ಮುನಿಸಿಪಲ್ ಶಾಲೆಗಳು, ತಾಲ್ಲೂಕ್ ಬೋರ್ಡಿಗೆ ಸೇರಿರುವುದು 11 ಮತ್ತು 116 ಏಡೆಡ್ ಶಾಲೆಗಳು ಇವೆ.

ಶ್ರೀ ಬಿ. ಎಲ್. ಗೌಡ.—ಜಿಲ್ಲಾ ಬೋರ್ಡ್ ಹೈಸ್ಕೂಲನ್ನು ತಾಲ್ಲೂಕ್ ಬೋರ್ಡಿಗೆ ವಹಿಸ ಬೇಕೆಂಬುದು ಸರ್ಕಾರದ ನೀತಿಯಾಗಿರುವಾಗ ಒಂದು ವರ್ಷದಿಂದ ಕೇಳಿದರೂ ವಹಿಸಿಕೊಳ್ಳದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಎಸ್. ಆರ್. ಕಂಠಿ.—ಆ ಬಗ್ಗೆ ಆರ್ಡರಾಗಿದೆ.

ಶ್ರೀ ಎಸ್. ಶಿವಪ್ಪ.—11-6-1962ರಲ್ಲಿ ಗಂಡಸಿಗೆ ಸರ್ಕಾರ ಮಂಜೂರುಮಾಡಿದ ಶಾಲೆಯನ್ನು ನಾಲ್ಕು ದಿವಸಗಳಮೇಲೆ ಆರ್ಡರು ಬದಲಾಯಿಸಿ ಸಂತೆ ಮೈದಾನದಲ್ಲಿ ಸ್ಥಾಪಿಸಬೇಕೆಂದು ತಿಳಿಸಿರುವುದಕ್ಕೆ ಕಾರಣವೇನು ?

ಶ್ರೀ ಎಸ್. ಆರ್. ಕಂಠಿ.—ಅದಕ್ಕೆ ನಿನ್ನೆ ಉತ್ತರ ಹೇಳಿದೆ.

ಶ್ರೀ ಎಸ್. ಶಿವಪ್ಪ.—ಐದು ಸಾವಿರ ಜನಸಂಖ್ಯೆ ಯಿರುವ ಗಂಡಸಿಯಲ್ಲಿ ನಾಲ್ಕು ತಿಂಗಳಿಂದ ನಡೆಸು ತ್ತಿದ್ದ ಖಾನಗಿ ಶಾಲೆಯನ್ನು ನಿನ್ನೆ ತಾನೆ ಸುಗ್ರೀವಾಜ್ಞೆಯ ಮೂಲಕ D.P.I. ರವರು ಬೇರೆ ಕಡೆಗೆ ಬದಲಾಯಿಸಿರುವುದು ಗಮನಕ್ಕೆ ಬಂದಿದೆಯೆ ?

ಶ್ರೀ ಎಸ್. ಆರ್. ಕಂಠಿ.—ಸರ್ಕಾರದವರು ಅದಕ್ಕೆ ರೆಕಗ್ನಿಷ್ಷ್ ಕೊಡುವುದಿಲ್ಲ ಎಂದು ಹೇಳಿದ್ದಾರೆ. ಅದರ ಅರ್ಥ ಯಾರೂ ನಡೆಸಲೇ ಬಾರದೆಂದು ಆಗುವುದಿಲ್ಲ. ಆದರೆ ಸರ್ಕಾರಕ್ಕೆ ಅದರ ಸಂಬಂಧವಿಲ್ಲ.

1-30 P.M.

ಶ್ರೀ ಎಸ್. ಶಿವಪ್ಪ.—ಗಂಡಸಿಯಲ್ಲಿ ನಾಲ್ಕು ತಿಂಗ ಳಿಂದ ನಡೆಸಿಕೊಂಡು ಬಂದಿರುವ ಖಾನಗಿ ಹೈಸ್ಕೂಲನ್ನು ಈ ಸಾಲಿನಲ್ಲಿ ನಡೆಸಿಕೊಂಡು ಹೋಗುವುದಕ್ಕೆ ಅವಕಾಶ ಕೊಡುತ್ತೀರಾ ?

ಶ್ರೀ ಎಸ್. ಆರ್. ಕಂಠಿ.—ಅವರು recognition ಕೊಡಬೇಕೆಂದು ಕೇಳಿದ್ದಾರೆ, ಅದನ್ನು ಕೊಡುವುದ ಕ್ಕಾಗುವುದಿಲ್ಲವೆಂದು ಹೇಳಿದ್ದೇವೆ.

ಶ್ರೀ ಎಸ್. ಶಿವಪ್ಪ.—ಆ ರೀತಿ ಆಜ್ಞೆ ಮಾಡುವುದರ ಮೂಲಕ ಈಗಾಗಲೇ ನಾಲ್ಕು ತಿಂಗಳಿನಿಂದ ಹೈಸ್ಕೂ ಲನ್ನು ನಡೆಸಿಕೊಂಡು ಬಂದಿರುವುದರಿಂದ ಅಲ್ಲಿ ಓದು ತ್ತಿರುವ ವಿದ್ಯಾರ್ಥಿಗಳಿಗೆ ತೊಂದರೆ ಆಗುವುದಿಲ್ಲವೆ ?

ಶ್ರೀ ಎಸ್. ಆರ್. ಕಂಠಿ.—ಹೇಗಾಗುತ್ತದೆಯೋ ನೋಡಬೇಕು.

ಶ್ರೀ ಎಸ್. ಶಿವಪ್ಪ.—ಈಗಲಾದರೂ ಸರ್ಕಾರ ಪುನರ್ವಿಮರ್ಶೆಮಾಡಿ ಆ ಹೈಸ್ಕೂಲು ಮುಂದು ವರಿಯುವುದಕ್ಕೆ ಅವಕಾಶ ಮಾಡಿಕೊಡುತ್ತಾರೆಯೆ ?

ಶ್ರೀ ಎಸ್. ಆರ್. ಕಂಠಿ.—ತಾವು ಹೇಳುತ್ತಿರು ವುದು ಒಂದು ಸೂಚನೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಖಾನಗಿ ಹೈಸ್ಕೂಲಿಗಾಗಿ ಐದು ಸಾವಿರ ರೂಪಾಯಿ ಕೊಟ್ಟ ದ್ದರೆ, ಒಂದು ಹೈಸ್ಕೂಲನ್ನು ಸಂತೆ ಮೈದಾನಕ್ಕೆ ಕೊಟ್ಟು ಜನ ಎಲ್ಲಿ ವಾಸ ಮಾಡುತ್ತಾರೋ ಅಲ್ಲಿಗೆ ಕೊಡದಿರುವುದಕ್ಕೆ ಕಾರಣವೇನು ?

ಶ್ರೀ ಎಸ್. ಆರ್. ಕಂಠಿ.—ಎಲ್ಲವನ್ನು ಪರಿಶೀಲನೆ ಮಾಡಿ ಡಿ.ಪಿ.ಐ. ಅವರು ಸಂತೆ ಮೈದಾನಕ್ಕೆ ಕೊಟ್ಟಿ ದ್ದಾರೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ತಾವು ಖುದ್ದು ಅಲ್ಲಿಗೆ ಹೋಗಿದ್ದಾಗ ಅಲ್ಲಿನ ಜನರು ತಮಗೆ ಅರಿಕೆ ಮಾಡಿಕೊಂಡರು, ಆ ವಿಷಯದಲ್ಲಿ ಏನು ಮಾಡಿ ದ್ದೀರಿ ?

ಶ್ರೀ ಎಸ್. ಆರ್. ಕಂಠಿ.—ನೀವೂ ನನ್ನ ಜೊತೆಗೆ ಬನ್ನಿ ಎಂದರೆ ಬರಲಿಲ್ಲ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ನಾನು ಬಾರ ದಿದ್ದರೆ ಚಿಂತೆಯಿಲ್ಲ, ಅಲ್ಲಿನ ಜನರು ಕೇಳಿದ್ದನ್ನು ಕೊಡುತ್ತೇವೆ, ಸಹಾನುಭೂತಿಯಿಂದ ಪರಿಶೀಲನೆ ಮಾಡುತ್ತೇವೆ ಎಂದು ಹೇಳಿದಿರಾ ?

ಶ್ರೀ ಎಸ್. ಆರ್. ಕಂಠಿ.—ಸರ್ಕಾರ ಎಷ್ಟು ಸಹಾನುಭೂತಿ ತೋರಿಸಬೇಕೋ ಅಷ್ಟು ತೋರಿಸು ತ್ತದೆ, ಒಂದು ವಿಷಯದಲ್ಲಿ ತೋರಿಸದೇಯಿದ್ದ ಮಾತ್ರಕ್ಕೇ ಸಹಾನುಭೂತಿಯಿಲ್ಲವೆಂದು ಹೇಳುವುದಕ್ಕಾಗುವುದಿಲ್ಲ.

ಶ್ರೀಮತಿ ಬಸವರಾಜೇಶ್ವರಿ.—ಕೆಲವು ಖಾನಗಿ ಹೈಸ್ಕೂಲುಗಳಿಗೆ ಗ್ರಾಂಟು ಕೊಡುವುದಕ್ಕಾಗುವುದಿಲ್ಲ ವೆಂದು ಹೇಳಿದ್ದೀರಿ, ಕಾರಣವೇನು ?

ಶ್ರೀ ಎಸ್. ಆರ್. ಕಂಠಿ.—ಮೂರನೆಯ ಪಂಚ ವಾರ್ಷಿಕ ಯೋಜನೆ ಅವಧಿಗೆ 700 ಹೈಸ್ಕೂಲುಗಳಾಗ ಬೇಕೆಂದು ಇರುವುದು. ಹೋದ ವರ್ಷ 70 ಹೈಸ್ಕೂಲು ಕೊಟ್ಟಿದ್ದೇವೆ, ಈ ವರ್ಷ ಶೇಕಡ 85 ಕೊಡುತ್ತೇವೆಂದು ಹೇಳಿದರೂ ಇಷ್ಟು ಜನರು ಅರ್ಜಿ ಹಾಕಿದರು, ಇವರೆಲ್ಲರಿಗೂ ಕೊಡುವುದಕ್ಕಾಗುವುದಿಲ್ಲ ವೆಂದು ತಿಳಿದ ಮೇಲೆ, ಸಂಖ್ಯೆಯನ್ನು ಮಿತಿಗೊಳಿಸ ಬೇಕಾಯಿತು. ಇನ್ನು ಮೇಲೆ ಯಾರಿಗೂ ಮೂರು ವರ್ಷ ಕಾಲ ಗ್ರಾಂಟ್ ಕೊಡುವುದಕ್ಕಾಗುವುದಿಲ್ಲ ವೆಂದು ಹೇಳಿದೆವು.

Sri G. DUGGAPPA.—For what reasons did you not recognise that school ?

Sri S. R. KANTHI.—For good reasons.

ಶ್ರೀ ವಿ. ಎಂ. ದೇವ್.—ಗಂಡಸಿಗೆ ಹೈಸ್ಕೂಲನ್ನು ಮೊದಲು ಕೊಟ್ಟು ಆ ಮೇಲೆ ಸಂತೆ ಮೈದಾನಕ್ಕೆ ಕೊಟ್ಟಿದ್ದಾರೆ, ಅಲ್ಲಿಗೆ ಊರಿನಿಂದ ಹೆಣ್ಣು ಮಕ್ಕಳು ಹೋಗುವುದಕ್ಕೆ ದೂರವಾಗುತ್ತದೆ ; ಅಲ್ಲದೆ ಸಂತೆ ಯಾದಾಗ ಗಲಾಟೆಯಿರುತ್ತದೆಂಬುದನ್ನು ಗಮನ ದಲ್ಲಿಟ್ಟು ಕೊಂಡಿದ್ದೀರಾ ?

ಶ್ರೀ ಎಸ್. ಆರ್. ಕಂಠಿ.—ಎಲ್ಲವನ್ನೂ ನೋಡಿ ಗಂಡಸಿ ಸಂತೆ ಮೈದಾನಕ್ಕೆ ಕೊಡಲಾಗಿದೆ. ಆದರೂ ಮುಂದಿನ ವರ್ಷ ಬನ್ನಿ ನೋಡೋಣ ಎಂದು ಹೇಳಿ ದ್ದೇನೆ.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಗಂಡಸಿಯ ಸಂತೆ ಮೈದಾನದ ಜನ ಸಂಖ್ಯೆ ಎಷ್ಟು, ಊರಿನ ಜನಸಂಖ್ಯೆ ಎಷ್ಟು ?

ಶ್ರೀ ಎಸ್. ಆರ್. ಕಂಠಿ.—ಗೊತ್ತಿಲ್ಲ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಸಂತೆ ಮೈದಾನ ದಲ್ಲಿ ಜನರಿಲ್ಲ, ಸಂತೆಯ ದಿವಸ ಮಾತ್ರ ಜನರಿರುತ್ತಾ ರೆಂಬುದು ಗೊತ್ತಿದೆಯೆ ?

ಶ್ರೀ ಎಸ್. ಆರ್. ಕಂಠಿ.—ಗಂಡಸಿ ಊರಿಗಿಂತ ಕಡಮೆ ಜನರಿದ್ದಾರೆಂದು ಹೇಳಬಹುದು.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಸಂತೆ ಮೈದಾನದಲ್ಲಿ ಯಾರೂ ವಾಸ ಮಾಡುವುದಿಲ್ಲ, ಗಂಡಸಿ ಎಂದರೆ ಜನ ವಾಸ ಮಾಡುವ ಊರು ಎಂಬುದು ಗೊತ್ತಿದೆಯೆ ?

ಶ್ರೀ ಎಸ್. ಆರ್. ಕಂಠಿ.—ಎರಡು ಸಲ ನೋಡಿದ್ದೇನೆ, ಗೊತ್ತಿದೆ.

ಶ್ರೀಮತಿ ಜಿ. ಸಿ. ಭಾಗೀರಥಮ್ಮ.—ಗ್ರಾಂಟು ಕೊಡುವುದಕ್ಕಾಗುವುದಿಲ್ಲವೆಂದು ಹೇಳುತ್ತಿದ್ದೀರಿ, ಕಟ್ಟಡ ಕಟ್ಟಿಸಲು ಉಚಿತವಾಗಿ ಜಾಗವನ್ನಾದರೂ ಕೊಡುತ್ತೀರಾ ?

ಶ್ರೀ ಎಸ್. ಆರ್. ಕಂಠಿ.—ಹೊಸ ಹೈಸ್ಕೂಲು ವಿಚಾರದಲ್ಲಿ ಕೆಲವು ನಿಯಮಗಳಿವೆ. ಅವರೇ ಸೈಟು ಕೊಡಬೇಕಾಗುತ್ತದೆ, ಸ್ವಲ್ಪ ಹಣ ಕೊಡಬೇಕಾಗುತ್ತದೆ, ರೂಲ್ಸ್ ಪ್ರಕಾರ ಅವರು ಇದನ್ನೆಲ್ಲಾ ಮಾಡಿದರೆ ಕೊಡಬಹುದಂದಿದೆ. ಆದರೆ ನಾವು ಏನು ಹೇಳುತ್ತಿದ್ದೇವೆಂದರೆ, ಸರ್ಕಾರ ಒಬ್ಬೇರೇ ಕೊಡುವುದಕ್ಕಾಗುವುದಿಲ್ಲ, ಅಲ್ಲಿ ಯಾವುದಾದರೂ ಹಳೆಮನೆ ಇದ್ದರೆ ಅಲ್ಲಿ ಸ್ಕೂಲನ್ನು ಮಾಡಬಹುದೆಂದು ಅನುಮತಿ ಕೊಟ್ಟಿದ್ದೇವೆ.

ಶ್ರೀ ವಿ. ಎಂ. ದೇವ್.—ಸರ್ಕಾರ ಹೀಗೆ ಮಾಡುವುದರಿಂದ, ಇದರಲ್ಲೇನೋ ಕೆಟ್ಟ ಪಕ್ಷಭಾವನೆಇವೆ ಎಂದು ತಿಳಿದುಕೊಂಡು, ಈರೀತಿ ಮಾತನಾಡಿಕೊಳ್ಳುತ್ತಿದ್ದಾರೆಂಬುದು ನಿಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಸ್. ಆರ್. ಕಂಠಿ.—ಇದರಲ್ಲಿ ಪಾರ್ಟಿ ಭಾವನೆಯೇನೂ ಇಲ್ಲ, ರಾಜಕೀಯವೇನೂ ಇಲ್ಲ, ನೀವು ಆರೀತಿ ಊಹಿಸಿರಬಹುದು.

ಶ್ರೀಮತಿ ಸುಶೀಲಾಬಾಯಿ ಹೀರಾಚಂದ್ ಷಾ.—ಮೂರು ವರ್ಷ ಗ್ರಾಂಟ್ ಕೊಡುವುದಿಲ್ಲವೆಂದು ಆಜ್ಞೆ ಮಾಡಿದ್ದೀರಿ, ಅದು ಗಂಡಸಿಯ ಸ್ಕೂಲಿಗೆ ಮಾತ್ರ ಅನ್ವಯಿಸುತ್ತದೆಯೋ ಅಥವಾ ಬೇರೆಕಡೆಗೂ ಅನ್ವಯಿಸುತ್ತದೆಯೋ?

ಶ್ರೀ ಎಸ್. ಆರ್. ಕಂಠಿ.—ಹೊಸದಾಗಿ ಕೇಳುವ ಸ್ಕೂಲುಗಳಿಗೆ ಅನ್ವಯಿಸುತ್ತದೆಂದು ಹೇಳಿದೆ.

ಶ್ರೀ ಸಿ. ಆರ್. ರಂಗೇಗೌಡ.—ವಿದ್ಯಾರ್ಥಿಗಳಿಗೆ freeship ಕೊಡುವುದನ್ನು ವರ್ಷದ ಕೊನೆಯಲ್ಲಿ ಮಂಜೂರು ಮಾಡುವುದರಿಂದ ಖಾಸಗಿ ಹೈಸ್ಕೂಲುಗಳಲ್ಲಿ ವಸೂರಾದ ಫೀಜನ್ನು ಇನ್ನೂ ವಾಪಸು ಮಾಡಿಲ್ಲವೆಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಸ್. ಆರ್. ಕಂಠಿ.—fee ವಿಚಾರ ಈಪ್ರಶ್ನೆಯ ಸಂಬಂಧದಲ್ಲಿ ಬರುವುದಿಲ್ಲ. ಪ್ರೈಮರಿ ಸ್ಕೂಲುಗಳಲ್ಲಿ ಯಾರಿಗೂ ಫೀ ಇಲ್ಲ; ಹೈಸ್ಕೂಲುಗಳಲ್ಲಿ 2400ರೂ ಪಾಯಿಗಿಂತ ಕಡಮೆ ವರಮಾನವಿರುವವರಿಗೆ ಫೀ ಇಲ್ಲ. ಇದರಿಂದ ಸ್ಕೇಡ 87ರಿಂದ 90ರವರೆಗೆ ಫೀ ಇರುವುದಿಲ್ಲ. ಒಂದು ವೇಳೆ ಕೆಲವರಿಂದ ತೆಗೆದುಕೊಂಡಿದ್ದರೆ ಅದನ್ನು ವಾಪಸುಕೊಡುತ್ತಾರೆ.

ಶ್ರೀ ಸಿ. ಆರ್. ರಂಗೇಗೌಡ.—ಒಂದು ವೇಳೆ ಅಂಥ ಸಂದರ್ಭಗಳನ್ನು ನಿಮ್ಮ ಗಮನಕ್ಕೆ ತಂದರೆ.. ...

ಶ್ರೀ ಎಸ್. ಆರ್. ಕಂಠಿ.—ತಂದರೆ ನೋಡೋಣ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಈಗ ಡಿ.ಡಿ.ಪಿ.ಐ. ಆಫೀಸಿನಿಂದ ವಿದ್ಯಾರ್ಥಿಗಳಿಗೂ ಜನರಿಗೂ ನೋಟೀಸ್ ಕೊಟ್ಟಿದ್ದಾರೆ; ನೀವೂ ಪರಿಶೀಲಿಸಿ ಒಪ್ಪಿಕೊಂಡರೆ ಮುಂದಿನ ವರ್ಷ recognition ಕೊಡುತ್ತೀರಾ ?

ಶ್ರೀ ಎಸ್ ಆರ್. ಕಂಠಿ.—ಮುಂದಿನ ವರ್ಷದ ಮಾತನ್ನು ಮುಂದೆ ನೋಡೋಣ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ—ಈಗಾಗಲೇ ಬೇರೆ ರೀತಿ ಹೇಳುತ್ತಿದ್ದೀರಿ; ಭರವಸೆ ಕೊಡುತ್ತೀರಾ ?

ಶ್ರೀ ಎಸ್. ಆರ್. ಕಂಠಿ.—ಮುಂದಿನವರ್ಷ ಬನ್ನಿ ಎಂದು ಹೇಳಿದ್ದೇನೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಆಶ್ವಾಸನೆ ಕೊಡುತ್ತೀರಾ ?

ಶ್ರೀ ಎಸ್. ಆರ್. ಕಂಠಿ.—ನೋಡೋಣ ಏನಾಗುತ್ತದೆಂದು.

ಶ್ರೀ ಎಚ್. ಎ. ಕರಿಲಿಂಗಣ್ಣನವರ್.—ಹೈಸ್ಕೂಲಿನಲ್ಲಿ ನಪಾಸ್ ಆದ ವಿದ್ಯಾರ್ಥಿಗಳಿಗೆ ಫೀ ತೆಗೆದುಕೊಳ್ಳುತ್ತೀರಾ ?

ಶ್ರೀ ಎಸ್. ಆರ್. ಕಂಠಿ.—ನಪಾಸ್ ಆದವರು ಪುನಃ ಸ್ಕೂಲಿಗೆ ಹೋದರೆ ಅವರು ಫೀ ಕೊಡಬೇಕಾಗುತ್ತದೆ.

ಶ್ರೀ ಎಚ್. ಎ. ಕರಿಲಿಂಗಣ್ಣನವರ್.—ಉತ್ಪತ್ತಿ ಅಥವಾ ವರಮಾನದ ಆಧಾರದ ಮೇಲೆ ಏನಾಯಿತಿ ಕೊಟ್ಟಮೇಲೆ ಹೀಗೆಮಾಡುವುದೆ ?

ಶ್ರೀ ಎಸ್. ಆರ್. ಕಂಠಿ.—ಯಾರು ಪಾಸ್ ಆಗುತ್ತಾರೋ ಅವರಿಗೆ ರಿಯಾಯಿತಿ.

ಶ್ರೀ ಕೆ. ದೇವಯ್ಯ.—ಸರ್ಕಾರಿ ಹೈಸ್ಕೂಲುಗಳಲ್ಲಿ Crafts, Hindi ಮುಂತಾದ ವಿಷಯಗಳನ್ನು ತೆಗೆದುಕೊಂಡು ಪಾಠಹೇಳುವ ಉಪಾಧ್ಯಾಯರಿಗೆ ಮುವ್ವತ್ತು ನಲವತ್ತು ವರ್ಷವಾಗಿದ್ದರೂ, ರೆಗ್ಯುಲರ್ ಕೊಡದೆ ಅವರು ಖಾಯಂ ಆಗಲು ಕಷ್ಟವಾಗುತ್ತದೆ, ಅವರಿಗೆ age bar ಆಗಿಹೋಗುತ್ತದೆ, ಆದಕಾರಣ ಅವರನ್ನು ಖಾಯಂ ಆಗಿ absorb ಮಾಡಿಕೊಳ್ಳಲು ಅವಕಾಶ ಕಲ್ಪಿಸುತ್ತೀರಾ ?

ಶ್ರೀ ಎಸ್. ಆರ್. ಕಂಠಿ.—ನೌಕರಿಗೆ ತೆಗೆದು ಕೊಳ್ಳುವಾಗ age bar ಪ್ರಶ್ನೆ ಬರುವುದು.....

ಶ್ರೀ ಕೆ. ದೇವಯ್ಯ.—ಹತ್ತಾರು ವರ್ಷ ಸರ್ಕಾರಿ ಸ್ಕೂಲುಗಳಲ್ಲಿ part-time ಕನ್ನಡ, ಹಿಂದಿ ಮತ್ತು ಡ್ರಿಲ್ ಉಪಾಧ್ಯಾಯರಾಗಿರುತ್ತಾರೆ, ಅವರನ್ನು ಖಾಯಂ ಮಾಡಿಲ್ಲ. ಆದರೆ ಈಚೆಗೆ ಬಂದಿರುವವರನ್ನು ಖಾಯಂ ಮಾಡಿದ್ದಾರೆ. ಇದನ್ನು ನರಿಪಡಿಸಲು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎಸ್. ಆರ್. ಕಂಠಿ.—ಇಂಥಾದ್ದು ಗಮನಕ್ಕೆ ಬಂದಿಲ್ಲ, ಈಗ ತಂದಿದ್ದೀರಿ, ವಿಚಾರಮಾಡಿ ನೋಡುತ್ತೇನೆ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಹೈಸ್ಕೂಲುಗಳನ್ನು ತಾಲ್ಲೂಕು ಬೋರ್ಡುಗಳಿಗೆ ಬಿಟ್ಟುಕೊಟ್ಟರ ಮಿಡ್ಲ್ ಸ್ಕೂಲು ಮತ್ತು ಪ್ರೈಮರಿ ಸ್ಕೂಲುಗಳ ಗತಿಯೇನು ?

ಶ್ರೀ ಎಸ್. ಆರ್. ಕಂಠಿ.—ಇನ್ನೂ ಅಖೈರಾಗಿ ಯಾವುದೇ ಒಂದು ಧೋರಣೆಯನ್ನು ನಿರ್ಧಾರ ಮಾಡಿಲ್ಲ.

Sri S. RAJAGOPAL.— What is the minimum strength required and what are the conditions required for the private people to start a school ?

ಶ್ರೀ ಎಸ್. ಆರ್. ಕಂಠಿ.— ಒಂದು ಹೈಸ್ಕೂಲು ಮಾಡಬೇಕಾದರೆ ಸಾಕಷ್ಟು ಸಂಖ್ಯೆಯಿರಬೇಕು. ಕನಿಷ್ಠಪಕ್ಷ ಒಂದು ಕ್ಲಾಸಿನಲ್ಲಿ 40 ಹುಡುಗರಿರಬೇಕು. ಇಂಥ ಸ್ಥಳದಲ್ಲಿ ಶಾರೆ ಕಟ್ಟಿಸುತ್ತೇವೆಂದು ಜಾಗ ತೋರಿಸಬೇಕು. ಆಗ 5,000 ರೂಪಾಯಿಗಳನ್ನು ಕೊಡುತ್ತೇವೆ.

ಶ್ರೀ ಕೆ.ಪಿ. ರೇವಣ್ಣ ಸಿದ್ದಪ್ಪ.—ಗಂಡಸಿ ಸಂತೆಯಲ್ಲಿ ಎಷ್ಟು ಜನರಿದ್ದಾರೆ.

ಶ್ರೀ ಎಸ್. ಆರ್. ಕಂಠಿ.—ಗಂಡಸಿ ಸಮೀಪದಲ್ಲಿದ್ದರೂ ತಾವು ನೋಡಿಲ್ಲ. 2 1-25 ಸಾವಿರ ರೂಪಾಯಿಗಳನ್ನು ಹಾಕಿ ಕಟ್ಟಡ ಕಟ್ಟಿದೆ ಅಲ್ಲಿ.

ಶ್ರೀ ಕೆ.ಪಿ. ರೇವಣ್ಣ ಸಿದ್ದಪ್ಪ.—Strength ಎಷ್ಟಿದೆ ಅಲ್ಲಿ?

ಶ್ರೀ ಎಸ್. ಆರ್. ಕಂಠಿ.—ಗಂಡಸಿಯ ಮೈದಾನದಲ್ಲಿ ಎಷ್ಟು ಹುಡುಗರ ಸಂಖ್ಯೆ ಇದೆಯೋ ಗೊತ್ತಿಲ್ಲ. ಆದರೆ ಒಂದು ಕಟ್ಟಡ ಕಟ್ಟಿದ್ದಾರೆ.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಹೈಸ್ಕೂಲಿನ Strength ಎಷ್ಟು ಎಂದು ನಾನು ಕೇಳಿದೆ.

Mr. SPEAKER.—The Minister may gather the information and pass it on to the member.

ಶ್ರೀ ಕೆ.ಪಿ. ರೇವಣ್ಣ ಸಿದ್ದಪ್ಪ.—30 ಹಳ್ಳಿಗಳಿವೆಯೇ?

ಶ್ರೀ ಎಸ್.ಆರ್. ಕಂಠಿ.—30ಕ್ಕಿಂತಲೂ ಜಾಸ್ತಿ ಇವೆ.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಈಗಲಾದರೂ ತರಿಸಿ ಹೇಳುತ್ತೀರಾ.

Mr. SPEAKER.— I disallow that supplementary as I have already directed the Minister to give the hon. member the information.

Sri S. RAJAGOPAL.—Is it true that recently a memo has been sent that newly-started high schools will get grant only after three years?

ಶ್ರೀ ಎಸ್. ಆರ್. ಕಂಠಿ.—ಈಗಿರುವ ಪರಿಸ್ಥಿತಿಯೇನೆಂದರೆ, 131 ಹೈಸ್ಕೂಲುಗಳು ಈಗ ಪ್ರಾರಂಭವಾಗಿರುವವುಗಳಲ್ಲಿ 31 ಹೈಸ್ಕೂಲುಗಳವರು ಸರಕಾರದಲ್ಲಿ ಅರ್ಜಿ ಸಲ್ಲಿಸಿರಲಿಲ್ಲ. ಅಂಥವರಿಗೆ ಅವಕಾಶ ಕೊಟ್ಟಿರಲಿಲ್ಲ. ಆದರೆ ಅವರು ಈ ವರ್ಷವೇ ಮಾಡಬೇಕೆಂದು ಹೇಳಿದ್ದರಿಂದ ಅವರಿಗೆ 3 ವರ್ಷ ಸಹಾಯ ದ್ರವ್ಯ ಕೊಡುವುದಿಲ್ಲವೆಂದು ಹೇಳಿದ್ದೇವೆ.

Sri S. RAJAGOPAL.—What is the date?

ಶ್ರೀ ಎಸ್. ಆರ್. ಕಂಠಿ.—ತಾರೀಖು ಹೇಳಲಾರೆ. ಸುಮಾರು ಜೂನ್ ತಿಂಗಳಲ್ಲಿ.

ಒಬ್ಬ ಮಾನ್ಯ ಸದಸ್ಯರು.—ಗಂಡಸಿ ಹೈಸ್ಕೂಲನ್ನು ಪ್ರೈವೇಟ್ ಮಾಡಿ ನಡೆಸಿದರೆ ಅಭ್ಯಂತರವಿಲ್ಲವೆಂದು ಹೇಳಿದಿರಾ?

ಶ್ರೀ ಎಸ್. ಆರ್. ಕಂಠಿ.— ನಾವು ಹೇಳಿದ್ದು ಅಭ್ಯಂತರವಿಲ್ಲವೆಂದಲ್ಲ. ಯಾರಾದರೂ ಸರ್ಕಾರದ ಸಹಾಯವಿಲ್ಲದೆ ನಡೆಸುತ್ತಿದ್ದರೆ ಅದನ್ನು 'ಬಂದು' ಮಾಡುವುದಕ್ಕಾಗುವುದಿಲ್ಲ, ಅಷ್ಟೆ.

ಶ್ರೀ ಟಿ. ಮಾದಯ್ಯಗೌಡ.—ಸರ್ಕಾರದವರು ಈಗ ಕೊಟ್ಟಿರತಕ್ಕ ಸ್ಕೂಲುಗಳ ಪೈಕಿ, ನೀವು ಗೊತ್ತು ಮಾಡಿರತಕ್ಕ ಸಂಖ್ಯೆಗಿಂತಲೂ ಕಡಿಮೆ ಮಕ್ಕಳಿರುವ ಸ್ಕೂಲುಗಳಿದ್ದು ಅವುಗಳನ್ನು ತಮ್ಮ ಗಮನಕ್ಕೆ ತಂದರೆ ಅವುಗಳ ವಿಷಯದಲ್ಲಿ ತಾವು ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಎಸ್. ಆರ್. ಕಂಠಿ.—ಎಷ್ಟು ಮಕ್ಕಳಿರಬೇಕೆಂದು ವಿಧಾಯಕವಾಗಿದೆಯೋ ಅದಕ್ಕಿಂತ ಕಡಮೆ ಮಕ್ಕಳಿದ್ದರೆ ಅಂಥಾ ಶಾಲೆಗಳಿಗೆ ಸರ್ಕಾರ ಹಣ ಕೊಡುವುದಿಲ್ಲ.

ಶ್ರೀ ಟಿ. ಮಾದಯ್ಯಗೌಡ.—ಕಡಮೆ ಮಕ್ಕಳಿರುವ ಸ್ಕೂಲುಗಳ ನಿದರ್ಶನವನ್ನು ತಮ್ಮ ಗಮನಕ್ಕೆ ತಂದರೆ ಅವುಗಳನ್ನು close ಮಾಡಿಸುತ್ತೀರಾ?

ಶ್ರೀ ಎಸ್. ಆರ್. ಕಂಠಿ.—close ಮಾಡುವ ಸಮಾಚಾರಕ್ಕೆ ಹೋಗುವುದಿಲ್ಲ. ಅವರಿಗೆ ಏನೂ ಸಹಾಯ ಕೊಡುವುದಿಲ್ಲ.

ಶ್ರೀಮತಿ ನಾಗರತ್ನಮ್ಮ ಹಿರೇಮಠ್.— 48 ಹೈಸ್ಕೂಲುಗಳನ್ನು ಪ್ರೈವೇಟ್ ಆಗಿ ನಡೆಸಲು ಕೊಟ್ಟಿದೆಯೆಂದು ಹೇಳಿದಿರಿ. ಅವುಗಳನ್ನು ಯಾರ್ಯಾರು ನಡೆಸುತ್ತಾರೆಂಬುದನ್ನು ಹೇಳುತ್ತೀರಾ?

ಶ್ರೀ ಎಸ್. ಆರ್. ಕಂಠಿ.—ಕೆಲವನ್ನು ಕಾರ್ಪೊರೇಷನ್ ನಡೆಸುತ್ತಿರಬಹುದು; ಇನ್ನು ಕೆಲವನ್ನು ಸೊಸೈಟಿಗಳು ನಡೆಸುತ್ತಿರಬಹುದು; ಹೆಸರನ್ನು ಹೇಳುವುದಕ್ಕಾಗುವುದಿಲ್ಲ.

Sri K. H. RANGANATH.— Sir, I have got a copy of the G. O. It says:

"Copy to the Head Master, High School, Gandasi proper (Unauthorised) for immediate necessary action. The unauthorised school should not be continued hereafter. The original transfer certificates brought from Middle Schools of all the students should be given back to the pupils and parents may be informed that the students will lose one year if they continue in his school."

Does it mean that the Government has authorised him to run the school at Gandasi?

ಶ್ರೀ ಎಸ್. ಆರ್. ಕಂಠಿ.—Unanshorised ಶಾಲೆಯಲ್ಲಿ ಮಕ್ಕಳು ಓದಿದರೆ, ಆ ಶಾಲೆಗಳನ್ನು Recognise ಮಾಡಿದ ಮೇಲೆ ಸರಿಹೋಗುತ್ತದೆಂದು ತಿಳಿದುಕೊಳ್ಳುವುದು ತಪ್ಪು. They will be doing it at their own risk.

ಶ್ರೀ ಕೆ. ಎಚ್. ರಂಗನಾಥ್.—ಸರ್ಕಾರದವರು ಅವರಿಗೆ ಯಾವ ವಿಧವಾದ ಸಹಾಯವನ್ನೂ ಅಪೇಕ್ಷಿಸದೆ ನಡೆಸಬಹುದೆಂದು 15-7-1962 ರಲ್ಲಿ ಒಂದು ಆರ್ಡರ್ ಕೊಟ್ಟಿದ್ದಾರೆಯಿದರೆ, ಸರ್ಕಾರದವರ ಉದ್ದೇಶ ಪ್ರೈವೇಟ್ ಇನ್‌ಸ್ಟಿಟ್ಯೂಷನ್‌ಗಳವರಿಗೆ ಹೈಸ್ಕೂಲುಗಳನ್ನು ನಡೆಸುವುದಕ್ಕೆ ಅವಕಾಶ ಕೊಡುತ್ತೀರೆಂಬ ತತ್ವಕ್ಕೆ ಸರಿಯಾಗಿದೆಯಲ್ಲವೇ?

ಶ್ರೀ ಎಸ್. ಆರ್. ಕಂಠಿ.—ಈಗ 135 ಶಾಲೆಗಳಿಗೆ Recognition ಕೊಟ್ಟಿದ್ದೇವೆ. ಈ ನಿಂದರ್ಭದಲ್ಲಿ ಇನ್ನೂ ಬಂದಿದ್ದ 200ಕ್ಕೂ ಮೇಲ್ಪಟ್ಟು ಅರ್ಜಿಗಳನ್ನು ನಿರಾಕರಿಸಿದ್ದೇವೆ. ಅವರುಗಳು ದುಡ್ಡು ಕೊಡುವುದಕ್ಕೆ ಸಿದ್ಧವಾಗಿದ್ದರೂ ನಿರಾಕರಿಸಿದ್ದೇವೆ. ಇದರ ಅರ್ಥ ಅವರಿಗೆ ಕೊಡುವುದಕ್ಕಾಗುತ್ತಿರಲಿಲ್ಲ ಎಂಬುದು. ಅದ್ದರಿಂದ ಗಂಡಸಿಯವರಿಗೂ ಕೊಡುವುದೆಂಬುದೇ ಇಲ್ಲ. ಹಣವಿದ್ದರೂ ಸರ್ಕಾರದವರು Recognition ಕೊಡಬೇಕೆಂಬುದೇನೂ ಇಲ್ಲ.

ಶ್ರೀ ಕೆ. ಎಚ್. ರಂಗನಾಥ್.— ರಾಜ್ಯಾಂಗದ ಪ್ರಕಾರ, ಯಾರೇ ಆಗಲಿ ಒಂದು ಸಂಸ್ಥೆಯನ್ನು ಮಾಡಿಕೊಂಡು ಒಂದು ಸ್ಕೂಲನ್ನು ನಡೆಸುತ್ತೇವೆಂದು

ಹೇಳಿದರೆ ಸರ್ಕಾರದವರು ಅದನ್ನು ನಡೆಸಕೂಡದೆಂದು ಹೇಳುವುದಕ್ಕೆ ಅಧಿಕಾರವೇನಿದೆ ?

ಶ್ರೀ ಎಸ್. ಆರ್. ಕಂಠಿ.—ರಾಜ್ಯಾಂಗದ ಪ್ರಕಾರ ನಾನು ಹೇಳಿದ್ದು ವ್ಯತಿರಿಕ್ತವಾಗುವುದಿಲ್ಲ ; ಅವರು ಬೇರೆ ಮಾರ್ಗ ಹಿಡಿಯಬಹುದು.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಸ್ಕೂಲನ್ನು ತಾವೇ ತೆರೆಯುತ್ತೇವೆಂದು ಹೇಳಿದರು ; ಅವರಿಗೆ ನೀವು Recognition ಕೊಡುವುದಿಲ್ಲವೆಂದು ಹೇಳುತ್ತೀರಲ್ಲಾ ; ಹೀಗಾದರೆ ನೀವು ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ಕೊಟ್ಟಂತಾಗುತ್ತದೆಯೇ ?

ಶ್ರೀ ಎಸ್ ಆರ್. ಕಂಠಿ.—ಎಷ್ಟೋ ನಲ ಇದಕ್ಕೆ ಉತ್ತರ ಹೇಳಿದ್ದೇನೆ. ಗ್ರಾಂಟ್ ಇಲ್ಲದೆ ಸ್ಕೂಲು ನಡೆಸುತ್ತೇವೆಂದು ಹೇಳುವವರು ಗಂಡಸಿಯವರೇ ಅಲ್ಲದೆ ಬೇರೆಯವರೂ ಇದ್ದಾರೆ. ಗಂಡಸಿಯವರಿಗೆ ಅವಕಾಶ ಕೊಟ್ಟರೆ ಬೇರೆಯವರಿಗೂ ಏಕೆ ಅವಕಾಶ ಕೊಡಕೂಡದು ? ಆದ್ದರಿಂದ ಬರೀ ಗ್ರಾಂಟ್ ಇಲ್ಲದೆ ಸ್ಕೂಲ್ ನಡೆಸುತ್ತೇವೆಂದು ಹೇಳಿದ ಮಾತ್ರಕ್ಕೆ ಸರ್ಕಾರದವರು ಅದಕ್ಕೆ ಸಮ್ಮತಿ ಕೊಡುವುದಿಲ್ಲ. ಅರ್ಜಿ ಯೋಗ್ಯವಾಗಿ ಕಂಡರೆ ಮಾತ್ರ ಕೊಡುತ್ತೇವೆ, ಇಲ್ಲದಿದ್ದರೆ ಇಲ್ಲ.

Sri S. SIVAPPA.—The hon. minister was pleased to say that he had no objection if private parties ran the high schools...

Sri S. R. KANTHI.—I only said that I could not prevent them.

Sri S. SIVAPPA.—Here is a particular situation where once a high school was granted permission and then that right was taken away from it and given to some other village, because of various influences. Now that village has come forward to run the school without asking for any grant, Government has ordered that that High School should be closed after it has run for four months. Taking this serious situation into consideration will the Chief Minister intervene and see that necessary arrangements are made to ensure the smooth running of that high school ?

Sri S. NIJALINGAPPA (Chief Minister).—I have listened with great interest to the supplementaries that are being put on this question about the Gandasi School. There seems to be a lot of politics behind this Gandasi School. I am very sorry that members are agitated over a small high school like this. I will assure the House that I will make due enquiries and if it is found that those people deserve encouragement, it will be given. I may tell hon. members that by the way they are putting supplementaries, they are not helping the Gandasi people. I think this chapter may be closed now.

ಶ್ರೀ ಜಿ. ವೆಂಕಟೇಗೌಡ.—ಜೂಜ್ ತಿಂಗಳಲ್ಲಿ ತಾವು ಕೆಲವು ಶಾಲೆಗಳಿಗೆ ಗ್ರಾಂಟು ಮಂಜೂರಾತಿ ಕೊಟ್ಟಿರಿ. ಮತ್ತೆ ಕೆಲವು ಶಾಲೆಗಳಿಗೆ 3 ವರ್ಷಗಳ ವರೆಗೆ ಗ್ರಾಂಟು ಕೊಡುವುದಿಲ್ಲವೆಂಬುದಾಗಿ ಸರ್ಕಾರ ತೀರ್ಮಾನ ತೆಗೆದು ಕೊಂಡಿದೆಯೆಂಬುದಾಗಿ ಹೇಳುತ್ತೀರಿ. ಅನುಮತಿ ಕೊಟ್ಟವರಿಗೂ ಗ್ರಾಂಟು ಕೊಡುವುದಿಲ್ಲವೆಂದು ಹೇಳುವ ಕಾರಣವೇನು ?

ಶ್ರೀ ಎಸ್. ಆರ್. ಕಂಠಿ.—ಅದನ್ನು ಯೋಚನೆ ಮಾಡಿಯೇ ಆ ಪ್ರಕಾರ ಆರ್ಡರ್ ಕೊಡಲಾಗಿದೆ.

Mr. SPEAKER.—I hold over questions Nos : 638, 639, 640 and 644, 697 for tomorrow.

Amount of money deposited by the Villagers of Somanahalli of Akkihebbal Hobli for construction of a hospital building.

*Q.—643. Sri N. NANJE GOWDA (Krishnarajapet).—

Will the Government be pleased to state.—

(*a*) the total amount of money deposited by the villagers of Somanahalli village, Akkihebbal Hobli, Krishnarajpet Taluk towards the Hospital Building Fund ;

(*b*) the date and the year in which the amount was deposited ;

(*c*) the difficulties in the way of commencing the work of the Hospital Building ?

*A.—Sri K. NAGAPPA ALVA (Minister for Health).—

(*a*) Rs. 7,500.

(*b*) Information regarding the exact date is not readily available. Amount was deposited during the year 1951.

(*c*) Since the donor did not execute the Mutchalika transferring the right over the site already donated by him to the Public Works Department.

ಶ್ರೀ ಎಚ್. ನಂಜೇಗೌಡ.—ದುಡ್ಡು ಕೊಟ್ಟಿದ್ದ ತಾರೀಖು ಗೊತ್ತಾಗಲಲ್ಲವೆಂದು ಹೇಳುತ್ತೀರಿ. ಕಾರಣವೇನು ?

ಶ್ರೀ ಕೆ. ನಾಗಪ್ಪ ಆಳ್ವ.—Exact date ನಮ್ಮಲ್ಲಿಲ್ಲ. ವರ್ಷದ ವಿಷಯ ಮಾತ್ರ ತಿಳಿಸಿದ್ದೇವೆ.

ಶ್ರೀ ಎಚ್. ನಂಜೇಗೌಡ.—ಈ ಕೆಲಸ ಅಂದಾಜಾಗಿ ಮಂಜೂರಾಗಿದೆಯೇ ?